19.07.2023

# ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.

**ಉಪಸ್ಥಿತರು :**

**ಶ್ರೀ ಮಹದೇವಪ್ಪ ಹೆಚ್., ಬಿ.ಎ.,ಎಲ್.ಎಲ್.ಬಿ.**
ಅಪರ ಹಿರಿಯ ಸಿವಿಲ್ ನ್ಯಾಯಾದೀಶರು
ಶ್ರೀರಂಗಪಟ್ಟಣ.

ದಿನಾಂಕ 12ನೇ ಜುಲೈ ಮಾಹೆ 2024

ಅಸಲು ದಾವಾ ಸಂಖ್ಯೆ ಃ 10/2024

ವಾದಿಗಳು ಃ ಶ್ರೀಮತಿ ಹೇಮಾವತಿ ಮತ್ತು ಇತರರು

**ವಿರುದ್ದ**

**ಪ್ರತಿವಾದಿಗಳು** ಃ ಶ್ರೀಮತಿ. ಮಂಜುಳ ಮತ್ತು ಇತರರು

## ಮಧ್ಯಂತರ **ಅರ್ಜಿ ಸಂಖ್ಯೆ :1**

**ಅರ್ಜಿದಾರರು** :- ಶ್ರೀಮತಿ. ಹೇಮಾವತಿ ಮತ್ತು ಇತರರು

(ವಾದಿಗಳ ಪರ ಶ್ರೀ.ಡಿ.ಆರ್.ಎಂ ವಕೀಲರು)

**- ವಿರುದ್ಧ -**

ಎದುರುದಾರರು :- ಶ್ರೀಮತಿ ಮಂಜುಳ ಮತ್ತು ಇತರರು
(1 ನೇ ಪ್ರತಿವಾದಿ ಪರ ಶ್ರೀ. ಸಿ.ಆರ್.ಎಸ್. ವಕೀಲರು,
3 ನೇ ಪ್ರತಿವಾದಿ ಪರ ಶ್ರೀ. ಕೆ.ಎಸ್.ಎನ್. ವಕೀಲರು
4 ನೇ ಪ್ರತಿವಾದಿ ಏಕಪಕ್ಷೀಯರಾಗಿರುತ್ತಾರೆ)

**: ನ್ಯಾ.ಪ್ರ.ಸಂ. ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯ ಸಂಖ್ಯೆ 1 ರ ಮೇಲೆ ಮಾಡಲಾದ ಆದೇಶ :**

ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ, ಘೋಷನಾತ್ಮಕ ಆದೇಶ ಕೋರಿ ದಾವೆ ಸಲ್ಲಿಸಿರುತ್ತಾರೆ.

2. ವಾದಿಯು ಮಧ್ಯಂತರ ಅರ್ಜಿ ನಂ.1 ನ್ನು ಸಲ್ಲಿಸಿ ತಮ್ಮ ಪ್ರಮಾಣ ಪತ್ರದಲ್ಲಿ ನೀಲಿ ಬೋರಯ್ಯ ರವರು ಕುಟುಂಬದ ಮೂಲ ಪುರುಷ ಇದ್ದು ಸದರಿಯವರಿಗೆ 1 ವೆಂಕಟಮ್ಮ, 2 ಪುಟ್ಟತಿಮ್ಮಮ್ಮ ಎನ್ನುವ ಇಬ್ಬರು ಹೆಂಡತಿಯರಿದ್ದು, ಮೊದಲನೇ ಹೆಂಡತಿ ವೆಂಕಟಮ್ಮ ರವರಿಗೆ ಪುಟ್ಟಮಂಜಪ್ಪ ಎನ್ನುವ ಮಗನಿದ್ದು, ಅವರಿಗೆ ವಾದಿ-1 ರವರು ಹೆಂಡತಿಯಾಗಿರುತ್ತಾರೆ, ವಾದಿ-2 ಮತ್ತು 3 ರವರು ಸದರಿಯವರ ಮಕ್ಕಳಾಗಿರುತ್ತಾರೆ. 2 ನೇ ಹೆಂಡತಿಗೆ ದಾವೆಯ 1 ನೇ ಪ್ರತಿವಾದಿ ಒಬ್ಬರೇ ಮಗಳಾಗಿರುತ್ತಾರೆ. ದಾವಾ ಆಸ್ತಿಗಳು, ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಜಂಟಿ ಸ್ವಾಧೀನಾನುಭವದಲ್ಲಿರುತ್ತಾರೆ. ಮೂಲ ಪುರಷ ನೀಲಿ ಬೋರಯ್ಯ ರವರು ತಮ್ಮ ಜೀವಿತ ಕಾಲಾವಧಿಯಲ್ಲಿ 1 ನೇ ಪ್ರತಿವಾದಿಯ ತಾಯಿಯ ಚಿತಾವಣೆಯ ಮೇರೆಗೆ ಹಾಗೂ ಜೂಜು, ಕುಡಿತ ಹಾಗೂ ಇತರೆ ದುಶ್ಚಟಗಳಿಗೆ ಬಲಿಯಾಗಿ 1 ನೇ ವಾದಿಯ ಅತ್ತೆ ಹಾಗೂ ಅವರ ಗಂಡನಿಗೆ ಮೂಲ ಸೌಕರ್ಯಗಳನ್ನು ನೀಡದೆ ನಿರ್ಲಕ್ಷ್ಯ ಮಾಡಿದ್ದರಿಂದ ಸದರಿಯವರು ತವರು ಮನೆಯಲ್ಲಿ ಜೀವನ ನಿರ್ವಹಿಸುತ್ತಾ ಬಂದಿರುತ್ತಾರೆ. ಪ್ರತಿವಾದಿ 1 ರವರು ದಾವಾ ಐಟಂ ನಂಬರ್ 2 ಮತ್ತು 7 ಆಸ್ತಿಯನ್ನು ವಾದಿಗಳ ಗಮನಕ್ಕೆ ಬಾರದಂತೆ ಮಾರಾಟ ಮಾಡಿರುತ್ತಾರೆ. 1 ನೇ ಪ್ರತಿವಾದಿಯು ಕಂದಾಯ ಅಧಿಕಾರಿಗಳೊಂದಿಗೆ ಷರೀಕ್ಕಾಗಿ ತನ್ನ ಹೆಸರಿಗೆ ಖಾತೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ, ಪ್ರತಿವಾದಿ 3 ಮತ್ತು 4 ರವರು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದು, ಸದರಿಯವರು ಬಲವಂತವಾಗಿ ಆಸ್ತಿಯನ್ನು ವಾದಿಗಳಿಂದ ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ತಮ್ಮ ಹೆಸರಿಗೆ ನಾಮಕಾವಸ್ಥೆಗೆ

ಸೃಷ್ಟಿಸಿಕೊಂಡಿರುತ್ತಾರೆ. ಸದರಿ ಆಸ್ತಿಗಳನ್ನು ಮಾರಾಟ ಮಾಡಿದರೆ ವಾದಿಯರಿಗೆ ತುಂಬಲಾರದಂತ ನಷ್ಟ ಉಂಟಾಗುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಪ್ರತಿವಾದಿ 1 ಮತ್ತು 3 ರವರು ತಕರಾರನ್ನು ಸಲ್ಲಿಸಿ, ತಮ್ಮ ತಕರಾರಿನಲ್ಲಿ ವಾದಿ ಸಲ್ಲಿಸಿರುವ ಈ ಅರ್ಜಿಯು ಕಾನೂನು ಮತ್ತು ವಾಸ್ತವಾಂಶದ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ವಾದಿಗಳು ಪ್ರತಿವಾದಿ 1 ರವರ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂಧ ಹೊಂದಿರುವುದಿಲ್ಲ, ವಾದಿಗಳು ಒಟ್ಟು ಕುಟುಂಬದ ಸದಸ್ಯ ರಾಗಿರುವುದಿಲ್ಲ. ಮೂಲ ಪುರುಷ ನೀಲಿ ಬೋರಯ್ಯ ರವರಿಗೆ ಪುಟ್ಟತಿಮ್ಮಮ್ಮ ಎನ್ನುವ ಏಕೈಕ ಹೆಂಡತಿ ಇದ್ದು, 1 ನೇ ಪ್ರತಿವಾದಿ ಒಬ್ಬಳೇ ಮಗಳಾಗಿರುತ್ತಾಳೆ. ಸದರಿ ನೀಲಿ ಬೋರಯ್ಯ ರವರು ಯಾವತ್ತು ಸಹಾ ಬೇರೆ ಯವರನ್ನು ಮದುವೆ ಯಾಗಿರುವುದಿಲ್ಲ. ನೀಲಿ ಬೋರಯ್ಯ ರವರು ಜೀವಂತವಾಗಿದ್ದಾಗ ಸದರಿ ನೀಲಿ ಬೋರಯ್ಯ ರವರಿಗೂ ಹಾಗೂ ಇತರರಿಗೂ ತಾಲ್ಲೂಕು, ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗೌರವಾನ್ವಿತ ಉಚ್ಚನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ನಡೆದಿದ್ದು, ಯಾವ ವ್ಯಾಜ್ಯದಲ್ಲಿಯೂ ಸಹ ವಾದಿಯರು ನೀಲಿ ಬೋರಯ್ಯ ರವರ ವಾರಸುದಾರರಾಗಿರುವುದಿಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ದಾವೆ ಸಲ್ಲಿಸಿ ಅದರಲ್ಲಿ ಸುಳ್ಳು ಅರ್ಜಿ ಸಲ್ಲಿಸಿರುತ್ತಾರೆ. 3 ನೇ ಪ್ರತಿವಾದಿಯು ಕಾನೂನು ಬದ್ದ ವಾರಸುದಾರರಾಗಿದ್ದು ದಾವಾ ಐಟಂ ನಂ.3 ಮತ್ತು 4 ಆಸ್ತಿಗಳನ್ನು ನೋಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿದ ದಿನಾಂಕದಿಂದಲೂ ಸಹಾ ಸದರಿಯವರು ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ಆದ್ದರಿಂದ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

6. ಈ ಮೇಲಿನ ವಾಸ್ತವಾಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ವಾದಿ/ಅರ್ಜಿದಾರರು ಮೇಲ್ನೋಟದ ದಾವೆಯನ್ನು ಹೊಂದಿರುತ್ತಾರೆಯೇ ?
2. ವಾದಿ/ಅರ್ಜಿದಾರರು ತುಲನಾತ್ಮಕ ಅನುಕೂಲತೆ ಹೊಂದಿರುವರೇ ?
3. ಮಧ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸದೇ ಇದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ಹಾನಿ ಉಂಟಾಗುತ್ತದೆಯೇ?
4. ಯಾವ ಆದೇಶ?

7. ವಾದಿ ಮತ್ತು 1 ನೇ ಪ್ರತಿವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು.

8. ಈ ಮೇಲಿನ ಅಂಶಗಳಿಗೆ ಕೆಳಗಿನಂತೆ ಉತ್ತರಿಸಲಾಗಿದೆ.

| | | |
|---|---|---|
| ಅಂಶ ನಂ.1ಕ್ಕೆ | ಃ | ಸಕರಾತ್ಮಕವಾಗಿ |
| ಅಂಶ ನಂ.2ಕ್ಕೆ | ಃ | ಸಕರಾತ್ಮಕವಾಗಿ |
| ಅಂಶ ನಂ.3ಕ್ಕೆ | ಃ | ಸಕರಾತ್ಮಕವಾಗಿ |
| ಅಂಶ ನಂ.4ಕ್ಕೆ | ಃ | ಮಾಡಲಾದ ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

**- ಃ ಕಾರಣಗಳು ಃ -**

9. **ಅಂಶ ನಂ.1 ರಿಂದ 3** ಃ ಅಂಶ ನಂ.1 ರಿಂದ 3 ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುತ್ತಾರೆ. ವಾದಿಗಳು ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿ 1 ಮತ್ತು 3 ರವರು ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

10. ಈ ಹಂತದಲ್ಲಿ ವಾದಿಗಳು ನ್ಯಾಯಾಲಯದ ಮುಂದೆ ಮೇಲ್ನೋಟದ ದಾವೆಯನ್ನು ಹೊಂದಿದ್ದು, ತುಲನಾತ್ಮಕ ಅನುಕೂಲತೆ ವಾದಿಗಳ ಪರವಾಗಿರುತ್ತದೆ, ಸದರಿ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆಂದು ರುಜುವಾತುಪಡಿಸುವ ಹೊಣೆಗಾರಿಕೆ ವಾದಿಗಳದ್ದೇ ಆಗಿರುತ್ತದೆ. ಸದರಿ ಈ ದಾವೆಯಲ್ಲಿ ವಾದಿಗಳು ನೀಲಿ ಬೋರಯ್ಯ ಎನ್ನುವವರಿಗೆ 2 ಜನ ಹೆಂಡತಿಯರಿದ್ದು ವಾದಿಗಳು ನೀಲಿ ಬೋರಯ್ಯ ರವರ ಸೊಸೆ ಮತ್ತು ಅವರ ಮಕ್ಕಳಿರುತ್ತಾರೆಂದು ಮತ್ತು ದಾವಾ ಆಸ್ತಿಗಳು ವಾದಿಗಳು ಮತ್ತು ಪ್ರತಿವಾದಿ 1 ರವರ ಪಿತ್ರಾರ್ಜಿತ ಆಸ್ತಿಯಾಗಳಾಗಿದ್ದು ಜಂಟಿ ಸ್ವಾಧೀನಾನುಭವದಲ್ಲಿರುತ್ತಾರೆಂದು, ಸದರಿ ಆಸ್ತಿಗಳಲ್ಲಿ ಭಾಗಾಂಶ ಕೋರಿದಾಗ ಪ್ರತಿವಾದಿಗಳು ನಿರಾಕರಿಸಿದ್ದರಿಂದ ದಾವೆ ಸಲ್ಲಿಸಲಾಗಿರುತ್ತದೆ ಎಂದು ವಾದಿಗಳ ವಾದ ಆಗಿರುತ್ತದೆ. ಅದೇ ರೀತಿ ಪ್ರತಿವಾದಿ 1 ರವರು ವಾದಿಗಳು ಪ್ರತಿವಾದಿ-1 ರವರ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ, ನೀಲಿ ಬೋರಯ್ಯ ರವರು ಜೀವಂತವಾಗಿದ್ದಾಗ ಸದರಿ ನೀಲಿ ಬೋರಯ್ಯ ರವರಿಗೂ ಹಾಗೂ ಇತರರಿಗೂ ತಾಲ್ಲೂಕು, ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗೌರವಾನ್ವಿತ ಉಚ್ಚನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ನಡೆದಿದ್ದು, ಯಾವ ವ್ಯಾಜ್ಯದಲ್ಲಿಯೂ ಸಹ ವಾದಿಯರು ನೀಲಿ ಬೋರಯ್ಯ ರವರ ವಾರಸುದಾರರಾಗಿರುವುದಿಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ದಾವೆ ಸಲ್ಲಿಸಿ ಅದರಲ್ಲಿ ಸುಳ್ಳು ಅರ್ಜಿ ಸಲ್ಲಿಸಿರುತ್ತಾರೆ.

11. ವಾದಿಗಳು ನ್ಯಾಯಲಯದ ಮುಂದೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ 7 ಪಹಣಿಗಳನ್ನು ಹಾಜರುಪಡಿಸಿದ್ದು ಸದರಿ ಪಹಣಿಗಳು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿ -1 ಹಾಗೂ ಅವರ ತಾಯಿಯ ಹೆಸರಿನಲ್ಲಿದ್ದು, ನಂತರ 2 ರಿಂದ 4 ನೇ ಪ್ರತಿವಾದಿಯರ ಹೆಸರಿಗೆ ಎಂ.ಆರ್.ಹೆಚ್ 66/2023-24, ಎಂ.ಆರ್.ಹೆಚ್ 15/2015-16, ಎಂ.ಆರ್. 72/2001-02, ಎಂ.ಆರ್. 77/1998-99, ಎಂ.ಆರ್. 1/2004-05 , ಎಂ.ಆರ್. 52/2004-05 ಖಾತೆಯಾಗಿರುತ್ತದೆ ಎಂದು ಸದರಿ ಪಹಣಿಗಳಿಂದ ಕಂಡುಬಂದಿರುತ್ತದೆ. ಪ್ರತಿವಾದಿ 1 ಮತ್ತು 3 ರವರು ಲಿಖಿತ ತಕರಾರನ್ನು ಹಾಗೂ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ. ಆದರೆ ತಾವು

ತೆಗೆದುಕೊಂಡಿರುವ ನಿಲುವಿಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯ ಪರ ವಕೀಲರು ತಮ್ಮ ವಾದ ಮಂಡನೆ ಕಾಲಕ್ಕೆ ದಿನಾಂಕ 03.08.1990 ರ ಕ್ರಯ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ನೀಲಿ ಬೋರಯ್ಯ ರವರು ಒಂದು ಆಸ್ತಿಯನ್ನು ಕೊಪ್ಪಲು ಗ್ರಾಮದ ಚೌಡೇಗೌಡ ರವರ ಮಗ ಬಿ.ಸಿ ಗೋಪಾಲಗೌಡ ರವರಿಗೆ ಮಾರಾಟ ಮಾಡಿದ್ದು, ಅದರಲ್ಲಿ ಕೆ.ಹೆಚ್ ನೀಲಿಬೋರಯ್ಯ ಮತ್ತು ನನ್ನ ಮಗ ಸುಮಾರು 21 ವರ್ಷ ವಯಸ್ಸಿನ ಕೆ.ಎಂ ಪುಟ್ಟ ಮಂಜಪ್ಪ ಮತ್ತು ಅವರ ಮಗಳು ಸುಮಾರು 14 ವರ್ಷದ ಮಂಜುಳ ರವರ ಮೈನರ್ ಗಾರ್ಡಿಯನ್ ಆಗಿ ಮಾರಾಟ ಮಾಡಲಾಗಿರುತ್ತದೆಂದು ಬರೆದಿರುವುದನ್ನು ಪರಿಶೀಲಿಸಿದಾಗ ವಾದಿಗಳು ಸದರಿ ನೀಲಿ ಬೋರಯ್ಯ ರವರ ಸೊಸೆ ಮತ್ತು ಮೊಮ್ಮಕ್ಕಳಿದ್ದು, ಒಟ್ಟು ಕುಂಟುಂಬದ ಸದಸ್ಯರಾಗಿರುತ್ತಾರೆಂದು ಮೇಲ್ನೋಟಕ್ಕೆ ನ್ಯಾಯಲಯಕ್ಕೆ ಕಂಡುಬಂದಿರುತ್ತದೆ, ಅದೇ ರೀತಿ ಪುಟ್ಟಮಂಜಪ್ಪ ರವರ ವರ್ಗಾವಣೆ ಪ್ರಮಾಣ ಪತ್ರದ ನಕಲನ್ನು ಹಾಜರುಪಡಿಸಿದ್ದು ಅದರಲ್ಲಿಯೂ ಸಹಾ ನೀಲಿಬೋರಯ್ಯ ರವರ ಮಗ ಪುಟ್ಟಮಂಜಪ್ಪ ಎಂದು ಇರುವುದನ್ನು ಸಹಾ ಪರಿಶೀಲಿಸಿದಾಗ ವಾದಿಗಳು ನೀಲಿ ಬೋರಯ್ಯ ರವರ ಸಂಬಂಧಿಕರಿರುತ್ತಾರೆಂದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಪ್ರತಿವಾದಿಗಳು ತೆಗೆದುಕೊಂಡಿರುವ ನಿಲುವಿಗೆ ಸಂಬಂಧಪಟ್ಟಂತೆ ದಾವೆಯಲ್ಲಿ ಪೂರ್ಣ ಪ್ರಮಾಣದ ವಿಚಾರಣೆಯ ಅವಶ್ಯಕತೆ ಇರುತ್ತದೆ. ಸದರಿ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಮಾರಾಟ ಮಾಡಿದರೆ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಮತ್ತು ದಾವೆಯ ಬಾವುಳ್ಯ ಹೆಚ್ಚಾಗುತ್ತದೆ. ವಾದಿಗಳು ನ್ಯಾಯಾಲಯದ ಮುಂದೆ ಮೇಲ್ನೋಟದ ದಾವೆಯನ್ನು ಹೊಂದಿದ್ದು, ತುಲನಾತ್ಮಕ ಅನುಕೂಲತೆ ವಾದಿಗಳ ಪರವಾಗಿರುತ್ತದೆ ಎಂದು, ಸದರಿ ಅರ್ಜಿಯನ್ನು ತಿರಸ್ಕಿರಿಸಿದರೆ ಪ್ರತಿವಾದಿಗಳಿಗಿಂತ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಎಂದು ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಆದ್ದರಿಂದ ಅಂಶ ನಂ.1 ರಿಂದ 3 ಕ್ಕೆ ಸಕರಾತ್ಮಕವಾಗಿ ಉತ್ತರಿಸಲಾಗಿದೆ.

16. <u>ಅಂಶ ನಂ.**4** ಃ</u> ಈ ಮೇಲಿನ ಅಂಶ ನಂ.1 ರಿಂದ 3 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ ಃ

<u>ಆದೇಶ</u>

- ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

- ಪ್ರತಿವಾದಿಗಳು ದಾವೆಯು ಇತ್ಯರ್ಥ ವಾಗುವ ವರೆಗೆ ದಾವಾ ಆಸ್ತಿಗಳನ್ನು ಯಾರಿಗೂ ಪರಭಾರೆ ಮಾಡಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮುಖಾಂತರ ನಿರ್ಬಂಧಿಸಲಾಗಿದೆ.

- ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.

**(ಶ್ರೀ.ಮಹದೇವಪ್ಪ.ಹೆಚ್.)**
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಶ್ರೀರಂಗಪಟ್ಟಣ.